**ಓ ಎಸ್ 19/2021** **ಪಿ.ಡಬ್ಲೂಃ 1**

**<u>ಸಾಕ್ಷಿಯನ್ನು ದಿಃ 17.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀಮತಿ ಬಿ.ಕೆ.ಎಸ್ ವಕೀಲರಿಂದಃ-</u>**

ನಮ್ಮ ಕುಟುಂಬದಲ್ಲಿ ಯಾವುದೆ ಸಮಸ್ಯೆಯಾಗಿದ್ದರೂ ಮಾತುಕತೆ ಮಾಡಿಕೊಂಡು ಬಗೆಹರಿಸಿಕೊಳ್ಳುತ್ತೇವೆ ಎಂದರೆ ಸರಿ. ನಮ್ಮ ಮನೆಯಲ್ಲಿ ವ್ಯವಹಾರದ ಸಂಪೂರ್ಣ ಜವಾಬ್ದಾರಿ ನಮ್ಮ ತಂದೆಯವರದ್ದೆ ಎಂದರೆ ಸರಿ. ಐಟಂ ನಂ. 5, ಸರ್ವೆ ನಂ. 165/4 ರ ಜಮೀನನ್ನು ಎಲ್ಲರ ಒಪ್ಪಿಗೆ ಮೇರೆಗೆ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಇನ್ನು ಕುಟುಂಬದ ಆಸ್ತಿಗಳು ಇದ್ದು, ಅವುಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಐಟಂ ನಂ. 5 ರ ಸ್ವತ್ತನ್ನು ದಿಃ 05.12.2012 ರಂದು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಕುಟುಂಬದ ಸ್ವತ್ತಾಗಿದ್ದು ಅದಕ್ಕೆ ನಾವ್ಯಾರು ಸಹಿ ಮಾಡಿಲ್ಲ ಎನ್ನುತ್ತಾರೆ. ಪಟೇಲ್ ವೀರಬದ್ರೇಗೌಡ ರವರು ನನಗೆ ಗೊತ್ತು. ನಾನು ಸಲ್ಲಿಸಿದ ದಾವೆ ಊರ್ಜಿತವಾದದ್ದಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್**

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.